ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಭದ್ರಾ ಜಲಾಶಯದ ಬಲದಂಡೆ ಕಾಲುವೆಯ ದುರಸ್ತಿ

31 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭದ್ರಾ ಜಲಾಶಯದ ಬಲದಂಡೆ ಕಾಲುವೆಯು ದುರಸ್ತಿ ಪ್ರಗತಿ

ಆ) ಹಾಗಾದರೆ ಅದು ಯಾವಾಗ ಸಂಪೂರ್ಣಗೊಳ್ಳುತ್ತದೆ ಮತ್ತು ಉಪಯೋಗಕ್ಕೆ ಬಳಸಲಾಗುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಭದ್ರಾ ಜಲಾಶಯದ ಬಲದಂಡೆ ಕಾಲುವೆಯ ಗೈಡ್‌ವಾಲ್‌ನ ಶಾಶ್ವತ ದುರಸ್ತಿ ಕಾಮಗಾರಿಯ ಪ್ರಸ್ತುತ ಪ್ರಗತಿ ಈ ಕೆಳಕಂಡಂತಿದೆ.

ಒಟ್ಟು ಕಾಂಕ್ರೀಟ್ ಪರಿಮಾಣ	33,451 ಘನ.ಮೀ.
ಸಾಧಿಸಲಾದ ಪ್ರಗತಿ	28,757 ಘನ.ಮೀ.
ಆರ್ಥಿಕ ಅಂದಾಜು ಮೊತ್ತ	ರೂ. 950 ಲಕ್ಷ
ಸಾಧಿಸಲಾದ ಪ್ರಗತಿ (ದಿನಾಂಕ 31-1-96ಕ್ಕೆ)	ರೂ. 715.7 ಲಕ್ಷ

ಆ) ಭದ್ರಾ ಬಲದಂಡೆ ಕಾಲುವೆಯ ದುರಸ್ತಿಯನ್ನು ದಿನಾಂಕ 25-3-96ಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ. ಅದರಂತೆ 1996ರ ಏಪ್ರಿಲ್ 96 ಮೊದಲ ವಾರದಲ್ಲಿ ಬಲದಂಡೆ ನಾಲೆಯನ್ನು ನೀರು ಹರಿಸಲು ಉಪಯೋಗಿಸಿಕೊಳ್ಳಲು ಯೋಜಿಸಲಾಗಿದೆ.

ಸಚಿವ ಸಂಪುಟ ಸದಸ್ಯರ ವಿದೇಶ ಪ್ರವಾಸ ಕುರಿತು

29 - ಶ್ರೀ ಎಚ್. ಶಿವಪ್ಪ (ಹರಿಹರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಿನಾಂಕ 1-1-1995ರಿಂದ ಜನವರಿ 1996ರ ಅಂತ್ಯದವರೆಗೆ, ವಿದೇಶ ಪ್ರವಾಸ ಮಾಡಿದ ಪ್ರತಿ ಸಚಿವ ಸಂಪುಟದ ಸದಸ್ಯರಿಗಾಗಿ ರಾಜ್ಯದ ಬೊಕ್ಕಸದಿಂದ ಮಾಡಿರುವ ಒಟ್ಟು ವೆಚ್ಚ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) 1)	ಮುಖ್ಯಮಂತ್ರಿಗಳು	-	1,42,245
2)	ಉಪ ಮುಖ್ಯಮಂತ್ರಿ	-	59,125
3)	ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು	-	1,45,442
4)	ಗಣಿ ಮತ್ತು ಭೂ ವಿಜ್ಞಾನ ಸಚಿವರು	-	89,000
5)	ಕೃಷಿ ಸಚಿವರು	-	44,700
6)	ತೋಟಗಾರಿಕೆ ರಾಜ್ಯ ಸಚಿವರು	-	55,000
7)	ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ಸ್ ರಾಜ್ಯ ಸಚಿವರು	-	30,365

8)	ಯುವಜನಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು	-	1,28,208
9)	ಹಣಕಾಸು ಸಚಿವರು	-	1,03,371
10)	ಸಣ್ಣ ಕೈಗಾರಿಕಾ ಸಚಿವರು	-	44,177
11)	ಸಣ್ಣ ನೀರಾವರಿ ರಾಜ್ಯ ಸಚಿವರು	-	90,000
12)	ಪಶುಸಂಗೋಪನಾ ರಾಜ್ಯ ಸಚಿವರು	-	2,59,645
13)	ಆರೋಗ್ಯ ಸಚಿವರು	-	43,030
	ಒಟ್ಟು		2,34,328

ಬೆಂಗಳೂರು ಮಹಾನಗರದ ವರ್ತುಲ ರಸ್ತೆಗಳ ಬಗ್ಗೆ

86 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಹಾಗೂ ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಮಹಾನಗರದ ಸುತ್ತ ನಿರ್ಮಾಣದ ಹಂತದಲ್ಲಿರುವ ವರ್ತುಲ ರಸ್ತೆಯ ಕಾಮಗಾರಿಯನ್ನು ಖಾಸಗಿಯವರಿಗೆ ವಹಿಸಿ ಕೊಡಲು ನಿರ್ಣಯವನ್ನು ಸರ್ಕಾರ ತೆಗೆದುಕೊಂಡಿದೆಯೇ, ಹಾಗಿದ್ದಲ್ಲಿ ಎಷ್ಟು ಕಿ.ಮೀ. ರಸ್ತೆಯನ್ನು ಖಾಸಗಿಯವರಿಗೆ ವಹಿಸಲಾಗಿದೆ?

ಆ) ಈ ವರ್ತುಲ ರಸ್ತೆಯ ಇಕ್ಕೆಲಗಳಲ್ಲಿ ಲಭ್ಯವಿರುವ ಜಾಗವನ್ನು ಲಾಭದಾಯಕವಾಗಿ, ವ್ಯಾಪಾರ, ವಾಣಿಜ್ಯ ಉದ್ದೇಶಗಳಿಗೆ ಬಳಕೆ ಮಾಡಿಕೊಳ್ಳಲು ಸರ್ಕಾರ ಮುಕ್ತ ಅವಕಾಶವನ್ನು ಕಲ್ಪಿಸಿ ಕೊಟ್ಟಿದೆಯೇ?

ಇ) ನಿಯೋಜಿತ ವರ್ತುಲ ರಸ್ತೆ ಎಷ್ಟು ಕಿ.ಮೀ. ಇದರಲ್ಲಿ ಬಿ.ಡಿ.ಎ. ಎಷ್ಟು ಅಭಿವೃದ್ಧಿ ಕಾರ್ಯಗಳನ್ನು ಪೂರೈಸಿದೆ?

ಈ) ಕರ್ನಾಟಕ ನಿರ್ಮಾಣ ನಿಗಮ ಅಥವಾ ಭೂ ಸೇನೆ ನಿಗಮಕ್ಕೆ ವರ್ತುಲ ರಸ್ತೆ ನಿರ್ಮಿಸುವ ಅವಕಾಶ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಆರ್. ರೋಷನ್‌ಬೇಗ್ (ಬೆಂಗಳೂರು ನಗರಾಭಿವೃದ್ಧಿ ಹಾಗೂ ವಕ್ಫ್ ರಾಜ್ಯ ಸಚಿವರು) :

ಅ) ಸರ್ಕಾರಿ ಆದೇಶ ಸಂಖ್ಯೆ : ಹೆಚ್‌ಯುಡಿ 20 ಎಂಎನ್‌ಜಿ 95 ದಿನಾಂಕ 4-5-95ರಲ್ಲಿ ಹೊರ ವರ್ತುಲ ರಸ್ತೆಯ ಕಾಮಗಾರಿಯನ್ನು ಖಾಸಗಿಯವರಿಗೆ ವಹಿಸಿಕೊಡಲು ಪರವಾನಗಿ ನೀಡಲಾಗಿದೆ. ಇಲ್ಲಿಯವರೆಗೆ ಈ ಕೆಲಸವನ್ನು ಖಾಸಗಿಯವರಿಗೆ ವಹಿಸಿಕೊಟ್ಟಿರುವುದಿಲ್ಲ. ಪ್ರಾಧಿಕಾರದಿಂದ ಖಾಸಗಿಯವರ ಪೂರ್ವಾರ್ಹತೆ ಪಡೆಯಲು ಕ್ರಮ ಕೈಗೊಳ್ಳಲಾಗಿದೆ.

ಆ) ಮೇಲೆ ತಿಳಿಸಿರುವ ಸರ್ಕಾರಿ ಆದೇಶಾನ್ವಯ ಹಳೀ ಮದರಾಸು ರಸ್ತೆ ಮತ್ತು ಸರ್ಜಾಪುರ ರಸ್ತೆ ನಡುವಿನ 12.20 ಕಿ.ಮೀ. ಉದ್ದದ ವರ್ತುಲ ರಸ್ತೆಯ ಇಕ್ಕೆಲಗಳ ಜಾಗವನ್ನು ಖಾಸಗಿಯವರು ವಾಣಿಜ್ಯ ಉದ್ದೇಶಕ್ಕಾಗಿ ಬಳಕೆ ಮಾಡಲು ಕೆಲವು ಷರತ್ತುಗಳಿಗೊಳಪಟ್ಟು ಅನುಮೋದಿಸಲಾಗಿದೆ.

ಇ) 62.09 ಕಿ.ಮೀ. ಉದ್ದದ ಹೊರ ವರ್ತುಲ ರಸ್ತೆಯನ್ನು ನಿರ್ಮಾಣ ಮಾಡಲು ಯೋಜಿಸಲಾಗಿದ್ದು, ಅದರಲ್ಲಿ 36.41 ಕಿ.ಮೀ. ಉದ್ದದ ರಸ್ತೆಯ ಕೆಲಸವನ್ನು